**<u>ದಿನಾಂಕ : *14-11-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರವಾಗಿ ಶ್ರೀ. ಎಮ್ ಎಸ್ ಡಿ ವಕೀಲರಿಂದ</u>**

ನಾನು ಈ ಕೆಳಕಂಡ ದಾಖಲೆಗಳನ್ನು ಗುರುತಿಸುತ್ತೇನೆ.
ನಿಪಿ-7 ಃ ಡಿಶ್ಚಾರ್ಜ ಸಮರಿ
ನಿಪಿ-8 ಃ ಓಪಿಡಿ ಚೀಟಿ
ನಿಪಿ-9 ಃ ವೈದ್ಯಕೀಯ ಬಿಲ್ಲುಗಳು
ಅರ್ಜಿಯಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ಕೋರುತ್ತೇನೆ.
**ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ ಎಮ್ ಎಸ್ ಹೆಚ್ ವಕೀಲರಿಂದ**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾನು ಮಾಹಿತಿಯನ್ನು ನೀಡಿರುತ್ತೇನೆ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಅಪಘಾತವು ಯಾವ ದಿನಾಂಕದಂದು ಆಗಿರುತ್ತದೆ ಎಂದು ನೆನಪಿರುವುದಿಲ್ಲ. ಅಪಘಾತವು ರಾತ್ರಿ 9.00 ಗಂಟೆಯ ಸುಮಾರಿಗೆ ಆಗಿರುತ್ತದೆ. ನನ್ನ ಮಗನಿಗೆ ಮೋಟರ ಸೈಕಲ್ ಡಿಕ್ಕಿ ಪಡಿಸಿರುತ್ತದೆ. ಅದರ ನಂಬರ ಗೊತ್ತಿರುವುದಿಲ್ಲ. ಸದರಿ ಮೋಟರ ಸೈಕಲ್ಲ ನಮ್ಮ ಊರಿನದು ಆಗಿತ್ತು ಮತ್ತು ಅವರು ನನಗೆ ಪರಿಚಯ ಇರುವುದಿಲ್ಲ. ಅಪಘಾತವನ್ನು ನೋಡಿದ ಹುಡುಗರು ಬಂದು ಹೇಳಿದ ತಕ್ಷಣ ನಾನು ಅಪಘಾತದ ಜಾಗೆಗೆ ಹೋಗಿರುತ್ತೇನೆ. ನನ್ನ ಮಗನ ತಲೆಗೆ ಪೆಟ್ಟಾಗಿತ್ತು. ನನ್ನ ಮಗನನ್ನು ಕೆರೂಡಿ ಅಸ್ಪತ್ರೆಗೆ ಸೇರಿಸಿರುತ್ತೇನೆ. ಆಸ್ಪತ್ರೆಗೆ ಹೋದಾಗ ರಾತ್ರಿ 11.00 ರಿಂದ 12.00 ಗಂಟೆಯಾಗಿತ್ತು. ನನ್ನ ಮಗನ ಸೊಂಟಕ್ಕೆ ಮತ್ತು ತಲೆಗೆ ಪೆಟ್ಟಾಗಿತ್ತು ಎಂದು ವೈದ್ಯರು ಹೇಳಿದ್ದರು. ನನ್ನ ಮಗನಿಗೆ ಸಲಾಯಿನ್ ಹಚ್ಚಿ ಆಕ್ಸಿಜನ್ ಹಾಕಿರುತ್ತಾರೆ. ಯಾವುದೇ ಆಪರೇಷನ ಮಾಡಿರುವುದಿಲ್ಲ. ಆಸ್ಪತ್ರೆಯಲ್ಲಿ 5 ದಿನಗಳ ಕಾಲ ಒಳರೋಗಿಯಾಗಿ ನನ್ನ ಮಗ ಇದ್ದನು. 5 ದಿನಗಳ ನಂತರ ಡಿಸ್ಚಾರ್ಜ ಆಗಿ ಮನೆಗೆ ಬಂದಿರುತ್ತಾನೆ. ದಿನಾಂಕ 06-03-2024 ರಂದು ಡಿಶ್ಚಾರ್ಜ ಆದ ನಂತರ ಯಾವಾಗ ದೂರು ನೀಡಿರುತ್ತೇನೆ ಎಂದು ನೆನಪಿರುವುದಿಲ್ಲ. ನಾನು ಹಾಜರು ಪಡಿಸಿದ ಗಾಯದ ಪ್ರಮಾಣ ಪತ್ರದಲ್ಲಿ ಸದರಿ ಅಪಘಾತವು ದಿನಾಂಕ 01-03-2024 ರಂದು ರಾತ್ರಿ 9.30 ಗಂಟೆ ಸುಮಾರಿಗೆ ಆಗಿರುತ್ತದೆ ಎಂದು ನಮೂದಿಸಿದ್ದು ಮತ್ತು ನನ್ನ ದೂರಿನಲ್ಲಿ ದಿನಾಂಕ 02-03-2024 ರಂದು ರಾತ್ರಿ 9.30 ಗಂಟೆ ಸುಮಾರಿಗೆ ಅಪಘಾತ ಆಗಿದೆ ಎಂದು ನಮೂದಿಸಿದ್ದು, ಹೀಗಾಗಿ ನಾನು ಕೊಟ್ಟ ದೂರು ಭೋಗಸ್ ಇರುತ್ತದೆ ಎಂದರೆ ಸರಿಯಲ್ಲ. ದೂರನ್ನು ನನ್ನ ಗಂಡ ನೀಡಿರುತ್ತಾರೆ. ಅಪಘಾತವಾದ 8 ದಿನಗಳ ನಂತರ ವಿಳಂಬವಾಗಿ ದೂರು ಏಕೆ ನೀಡಿರುತ್ತೀರಿ ಎನ್ನುವ ಪ್ರಶ್ನೆಗೆ

ಸಾಕ್ಷಿದಾರರು ಅಪಘಾತವಾದ ನಂತರ ಆಸ್ಪತ್ರೆಗೆ ಹೋಗಿದ್ದು, ಹಾಗಾಗಿ ದೂರು ನೀಡಲು ವಿಳಂಬ ಆಗಿರುತ್ತದೆ ಎಂದು ಹೇಳುತ್ತಾರೆ. ಅಪಘಾತ ಪಡಿಸಿದ ವಾಹನಕ್ಕೆ ಏನು ಆಗಿತ್ತು ಎಂದು ನಾನು ನೋಡಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ಅಪಘಾತವಾದ ನಂತರ ನನ್ನ ಮಗನನ್ನು ನೋಡಲು ಹೋಗಿದ್ದರಿಂದ ವಾಹನವನ್ನು ನೋಡಿರುವುದಿಲ್ಲ ಎಂದು ಹೇಳುತ್ತಾರೆ. ಬೈಕ ಚಾಲಕನ ಹೆಸರು ಗೊತ್ತಿರುವುದಿಲ್ಲ. ಅಪಘಾತವಾದ ನಂತರ ಅಪಘಾತ ಪಡಿಸಿದ ವಾಹನದ ಚಾಲಕನ ಹೆಸರನ್ನು ತಿಳಿದುಕೊಂಡಿರುತ್ತೇನೆ ಆದರೆ ಈಗ ನೆನಪಿರುವುದಿಲ್ಲ. ನಾವು ವಾಹನದ ಮಾಲೀಕರಿಗೆ ಆಸ್ಪತ್ರೆಯ ಖರ್ಚು ಕೊಡಿ ಎಂದು ಕೇಳಿರುತ್ತೀರಾ ಎಂದರೆ ಸಾಕ್ಷಿದಾರರು ಅವರು ನಮ್ಮ ಸಮೀಪ ಬಂದಿರುವುದಿಲ್ಲ ಎಂದು ಹೇಳುತ್ತಾರೆ. ಅಪಘಾತ ಪಡಿಸಿದ ಚಾಲಕನಿಗೆ ಡಿಎಲ್ ಇರದೇ ಇರುವುದರಿಂದ ಪರಿಹಾದ ಹಣವನ್ನು ಕೊಡಲು 1ನೇ ಎದುರುದಾರರು ಭಾದ್ಯಸ್ತರು ಎಂದರೆ ಸರಿಯಲ್ಲ. ನನ್ನ ಮಗ ಶಾಲೆಗೆ ಹೋಗುತ್ತಾನೆ. ನನ್ನ ಮಗನ ಜನನ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ನಾನು ಸಲ್ಲಿಸಿದ ವೈದ್ಯಕೀಯ ಬಿಲ್ಲುಗಳು ಖೊಟ್ಟಿಯಾಗಿರುತ್ತವೆ ಎಂದರೆ ಸರಿಯಲ್ಲ. ನನ್ನ ಮಗನಿಗೆ ಸದರಿ ವಾಹನವು ಅಪಘಾತ ಪಡಿಸಿರುವುದಿಲ್ಲ ಮತ್ತು ಪರಿಹಾರದ ಹಣಕ್ಕೊಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಶಾಲೆಗೆ ಹೋಗುತ್ತಾನೆ ಮತ್ತು ಆರಾಮ ಇರುವುದರಿಂದ ಅವನಿಗೆ ಪರಿಹಾರದ ಹಣವನ್ನು ಪಡೆಯಲು ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.